# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2092
2 ಸದಸ್ಯರ ಹೆಸರು : ಶ್ರೀ ಮುನಿರಾಜು ಗೌಡ ಪಿ.ಎಂ (ವಿಧಾನಸಭೆಯಿಂದ ಚುನಾಯಿತರಾದವರು)
3 ಉತ್ತರಿಸುವ ದಿನಾಂಕ : 17-03-2022
4 ಉತ್ತರಿಸುವ ಸಚಿವರು : ಗೃಹ ಸಚಿವರು

| ಪ್ರಶ್ನೆ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಎ.ಎಸ್.ಐ ಹುದ್ದೆಯ ಸಿಬ್ಬಂದಿಗಳು ಕೂಡ ಹೆಚ್.ಸಿ ಮತ್ತು ಪಿಸಿಗಳಂತೆಯೇ ಕೆಲಸ ಮಾಡುತ್ತಿದ್ದು ಅವರಿಗೆ ವಾರದ ರಜೆ ನೀಡದಿರಲು ಕಾರಣಗಳೇನು; | ಹೆಚ್‌ಸಿ ಮತ್ತು ಪಿಸಿ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸ್ ಸಿಬ್ಬಂದಿಯವರುಗಳು ಹಗಲು ಮತ್ತು ರಾತ್ರಿ ಬೀಟ್ ಕರ್ತವ್ಯ ಹಾಗೂ ಹೆಚ್ಚಿನದ್ದಾಗಿ ಹೊರಾಂಗಣ ಕರ್ತವ್ಯಗಳನ್ನು ನಿರ್ವಹಿಸುವುದರಿಂದ ಅವರ ಮಾನಸಿಕ ಸ್ಥಿತಿಯನ್ನು ವೃದ್ಧಿಸಲು ಅನುಕೂಲವಾಗುವಂತೆ ಸದರಿ ಸಿಬ್ಬಂದಿಯವರುಗಳಿಗೆ ವಾರದ ರಜೆಯನ್ನು ನೀಡಲಾಗುತ್ತಿದೆ.<br><br>ಎ.ಎಸ್.ಐ ಹುದ್ದೆಯು ಅಧಿಕಾರಿ ದರ್ಜೆಯದ್ದಾಗಿರುವುದರಿಂದ ಎ.ಎಸ್.ಐ ವೃಂದದವರಿಗೆ ವಾರದ ರಜೆಯನ್ನು ನೀಡಲಾಗುತ್ತಿರುವುದಿಲ್ಲ. |
| (ಆ) | ಬಹುತೇಕ ಎ.ಎಸ್.ಐ ಹುದ್ದೆಯ ಸಿಬ್ಬಂದಿಗಳು 50 ವರ್ಷ ವಯೋಮಾನದ ಆಸುಪಾಸಿನವರಾಗಿದ್ದು ಈ ಸಿಬ್ಬಂದಿಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಕಛೇರಿ ಕೆಲಸಗಳಿಗೆ ನಿಯೋಜಿಸುವ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದೇ; | ಪ್ರಸ್ತುತ ಎ.ಎಸ್.ಐ ದರ್ಜೆಯ ಅಧಿಕಾರಿಗಳು ಹೆಚ್ಚಿನದ್ದಾಗಿ ಮೇಲ್ವಿಚಾರಣೆ ಮತ್ತು ಕಛೇರಿ ಕರ್ತವ್ಯಗಳನ್ನೇ ನಿರ್ವಹಿಸುತ್ತಿರುತ್ತಾರೆ. |
| (ಇ) | ಎ.ಎಸ್.ಐ ಹುದ್ದೆಯ ಸಿಬ್ಬಂದಿಗಳು ಅಧಿಕಾರಿಗಳೂ ಅಲ್ಲ, ಸಿಬ್ಬಂದಿಯೂ ಅಲ್ಲ ಎಂಬಂತಹ ಪರಿಸ್ಥಿತಿಯಲ್ಲಿರುವ ಕುರಿತು ಸರ್ಕಾರ ನಿಲುವೇನು; | ಎ.ಎಸ್.ಐ ಹುದ್ದೆಯು ಅಧಿಕಾರಿ ದರ್ಜೆಯದ್ದಾಗಿರುತ್ತದೆ. |

ಸಂಖ್ಯೆ: ಒಇ 48 ಪಿಇಐ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು